StudentBounty.com

0204

**Second Semester of 3 Year LL.B./Sixth Semester of 5 Yr. B.A. LL.B., B.B.A. LL.B. Degree Examination, June/July 2012**
**ADMINISTRATIVE LAW (Course – IV)**

Duration : 3 Hours Max. Marks : 100

**Instructions** : 1. Answer **all five** questions.
ಐದು ಪ್ರಶ್ನೆಗಳಿಗೆ ಉತ್ತರಿಸಿ.
2. Figures to the **right** indicate marks.
ಬಲಬದಿಯ ಸಂಖ್ಯೆಗಳು ಅಂಕಗಳಾಗಿವೆ.
3. Answers should be written completely either in **English** or **Kannada**.
ಉತ್ತರಗಳನ್ನು ಸಂಪೂರ್ಣವಾಗಿ **ಕನ್ನಡ** ಅಥವಾ **ಇಂಗ್ಲೀಷ್‌ನಲ್ಲಿ** ಬರೆಯಬೇಕು.

**UNIT – I**

Q. No. 1. (a) Discuss the concept of prof. Dicey's rule of law. Explain it's role in the Development of Administrative Law. Marks : 15
ಪ್ರೊ. ಡೈಸಿಯವರ ಕಾನೂನು ಆಳ್ವಿಕೆ ಪರಿಕಲ್ಪನೆಯನ್ನು ಚರ್ಚಿಸಿರಿ. ಆಡಳಿತಾತ್ಮಕ ಕಾನೂನಿನ ಬೆಳವಣಿಗೆಯಲ್ಲಿ ಅದರ ಪಾತ್ರವನ್ನು ವಿವರಿಸಿರಿ.

OR/ಅಥವಾ

What are administrative directions ? Explain identification of them.
ಆಡಳಿತಾತ್ಮಕ ನಿರ್ದೇಶನಗಳೆಂದರೇನು ? ಅವುಗಳ ಗುರುತಿಸುವಿಕೆ ಬಗ್ಗೆ ವಿವರಿಸಿರಿ.

(b) State distinctions between administrative directions and rules. Marks : 5
ಆಡಳಿತಾತ್ಮಕ ನಿರ್ದೇಶನಗಳಿಗೂ ಮತ್ತು ನಿಯಮಗಳಿಗೂ ಇರುವ ವ್ಯತ್ಯಾಸಗಳನ್ನು ಹೇಳಿರಿ.

OR/ಅಥವಾ

Write a brief note on doctrine of separation of powers.
ಅಧಿಕಾರ ವಿಭಜನಾ ಸಿದ್ಧಾಂತದ ಬಗ್ಗೆ ಒಂದು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

**UNIT – II**

Q. No. 2.(a) What is delegated legislation ? What are the constitutional limitations on the delegation of legislative power in India ? Marks : 15
ಪ್ರತ್ಯಾಯೋಜಿತ ಶಾಸನವೆಂದರೇನು ? ಭಾರತದಲ್ಲಿ ಪ್ರತ್ಯಾಯೋಜಿತ ಶಾಸನದ ಅಧಿಕಾರದ ಮೇಲೆ ಇರುವ ಸಂವಿಧಾನಾತ್ಮಕ ಮಿತಿಗಳೇನು ?

OR/ಅಥವಾ

**P.T.O.**

www.StudentBounty.com

Discuss the parliamentary control over delegated legislation in India.

ಭಾರತದಲ್ಲಿ ಪ್ರತ್ಯಾಯೋಜಿತ ಶಾಸನದ ಮೇಲೆ ಇರುವ ಸಂಸದೀಯ ನಿಯಂತ್ರಣವನ್ನು ಚರ್ಚಿಸಿರಿ.

(b) A statute prohibits the advertisement of drugs suggesting it's use in diagnosis, cure or treatment of "Veneral diseases". The statute also delegates to the central government the power of extending the application of the Act to "any other disease or diseases". Decide the validity of such delegation. Marks : 5

ಒಂದು ಶಾಸನವು ''ಗುಪ್ತ ರೋಗಗಳಿಗೆ'' ಸಂಬಂಧಿಸಿದಂತೆ ಔಷಧಿಗಳನ್ನು ರೋಗಪತ್ತೆ ಹಚ್ಚುವಲ್ಲಿ, ಗುಣಪಡಿಸುವಲ್ಲಿ ಅಥವಾ ಉಪಚರಿಸುವಲ್ಲಿಯ ಉಪಯೋಗದ ಬಗ್ಗೆ ಜಾಹೀರಾತು ಕೊಡುವುದನ್ನು ನಿಷೇದಿಸುತ್ತದೆ. ಈ ಶಾಸನವು ''ಬೇರೆ ಯಾವುದೇ'' ''ರೋಗ ಅಥವಾ ರೋಗಗಳಿಗೆ'' ಅಧಿನಿಯಮವನ್ನು ವಿಸ್ತರಿಸುವ ಅಧಿಕಾರವನ್ನು ಕೇಂದ್ರಸರ್ಕಾರಕ್ಕೆ ಪ್ರತ್ಯಾಯೋಜನೆ ಮಾಡುತ್ತದೆ. ಈ ಪ್ರತ್ಯಾಯೋಜನೆಯ ವಿಧಿ ಬದ್ಧತೆಯನ್ನು ಚರ್ಚಿಸಿರಿ.

OR/**ಅಥವಾ**

A statute delegates certain of it's powers to the central government. The Government further sub-delegates the same powers to the administrative authority. Is this sub-delegation valid ?

ಒಂದು ಶಾಸನವು ತನ್ನ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ಪ್ರತ್ರ್ಯಾಯೋಜನೆ ಮಾಡುತ್ತದೆ. ಸರ್ಕಾರವು ಆ ಅಧಿಕಾರಗಳನ್ನು ಆಡಳಿತಾತ್ಮಕ ಪ್ರಾಧಿಕಾರಕ್ಕೆ ಉಪ-ಪ್ರತ್ಯಾಯೋಜನೆ ಮಾಡುತ್ತದೆ. ಈ ಉಪ-ಪ್ರತ್ಯಾಯೋಜನೆ ಊರ್ಜಿತವೇ ?

**UNIT – III**

Q. No. 3. (a) Critically analyse the rule "Audi Alteram Partem". Marks : 15

"ಇನ್ನೊಂದು ಪಕ್ಷದವನನ್ನು ಶ್ರವಣ ಮಾಡಿಕೊಳ್ಳುವುದು" ಎನ್ನುವ ನಿಯಮವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರಿ.

OR/**ಅಥವಾ**

Discuss institutional decisions. Refer decided cases.

ತೀರ್ಮಾನಿಸಿದ ಪ್ರಕರಣಗಳೊಂದಿಗೆ ಸಂಸ್ಥಾ ನಿರ್ಣಯಗಳನ್ನು ಚರ್ಚಿಸಿರಿ.

StudentBounty.com

www.StudentBounty.com

StudentBounty.com

(b) An adjudication proceeding started with out giving notice to the affected person. However, the affected person appears and submits representation before the adjudicator. Is this proceeding valid ? Marks : 5

ತೊಂದರೆ (ಬಾದೆ)ಗೊಳಗಾದ ವ್ಯಕ್ತಿಗೆ ಸೂಚನೆಯನ್ನು ನೀಡದೆ ಒಂದು ನ್ಯಾಯ ನಿರ್ಣಯ ವ್ಯವಹರಣೆಗಳು ಪ್ರಾರಂಭವಾಗುತ್ತದೆ. ಆದಾಗ್ಯೂ ತೊಂದರೆಗೊಳಗಾದ ವ್ಯಕ್ತಿ ನ್ಯಾಯ ನಿರ್ಣಯಕಾರನ ಮುಂದೆ ಹಾಜರಾಗಿ ಮನವಿ ಸಲ್ಲಿಸುತ್ತಾನೆ. ಈ ವ್ಯವಹರಣೆಯು ಕ್ರಮಬದ್ಧವೇ ?

OR/**ಅಥವಾ**

'X' was dismissed from his service by the collector of customs. He preferred an appeal to the president of India as was provided under service rules. The ministry of finance rejected the appeal without reference to the President. Is it valid ?

ಸುಂಕದ ಅಧಿಕಾರಿಯು 'X' ಎಂಬುವನನ್ನು ಕೆಲಸದಿಂದ ತೆಗೆದು ಹಾಕುತ್ತಾನೆ. ಸೇವಾ ನಿಯಮಗಳಂತೆ 'X' ನು ರಾಷ್ಟ್ರಪತಿಗಳಿಗೆ ಮೇಲ್ಮನವಿಯನ್ನು ಸಲ್ಲಿಸುತ್ತಾನೆ. ಅರ್ಥ ಸಚಿವಾಲಯವು ರಾಷ್ಟ್ರಪತಿಯವರ ಅಭಿಪ್ರಾಯ ಕೇಳದೆ ಮೇಲ್ಮನವಿಯನ್ನು ತಿರಸ್ಕರಿಸಿತು. ಇದು ಸರಿಯೇ ?

## UNIT – IV

Q. No. 4. (a) Government liability in contract depend upon fulfillment of certain conditions. Elucidate and refer decided cases. Marks : 15

ಒಪ್ಪಂದಗಳಿಗೆ ಸರ್ಕಾರದ ಹೊಣೆಗಾರಿಕೆಯು ಕೆಲವು ಷರತ್ತುಗಳನ್ನು ಪೂರೈಸುವುದರ ಮೇಲೆ ಅವಲಂಬನೆಗೊಂಡಿದೆ. ತೀರ್ಮಾನಿಸಿದ ಪ್ರಕರಣಗಳೊಂದಿಗೆ ವಿಷದೀಕರಿಸಿ.

OR/**ಅಥವಾ**

Examine the scope of writ-of-Quo-Warranto. Refer decided cases.

ತೀರ್ಮಾನಿಸಿದ ಪ್ರಕರಣಗಳೊಂದಿಗೆ ಅಧಿಕಾರ ಪ್ರಶ್ನೆ ರಿಟ್‌ನ ವ್ಯಾಪ್ತಿಯನ್ನು ಪರೀಕ್ಷಿಸಿರಿ.

(b) Whether "State" is bound by a statute ? Marks : 5

"ರಾಜ್ಯ"ವು ಶಾಸನಕ್ಕೆ ಬದ್ಧವೇ ?

OR/**ಅಥವಾ**

www.StudentBounty.com

The police assigned with the duty of protecting collector's office apprehending an attack from an unlawful assembly resorts to lathi charge without magesterial order 'X', who is not a member of the unlawful assembly sustained serious injuries. He wants to claim damages from the state government. Will he succeed ?

ಜಿಲ್ಲಾಧಿಕಾರಿ ಕಛೇರಿಯ ಸಂರಕ್ಷಣೆ ಕರ್ತವ್ಯದ ಮೇಲಿದ್ದ ಆರಕ್ಷಕರು ಕಾನೂನು ಬಾಹಿರ ಕೂಟದ ಆಕ್ರಮಣವನ್ನು ಶಂಕಿಸಿ ದಂಡಾಧಿಕಾರಿಗಳ ಆದೇಶವಿಲ್ಲದೆ ಲಾಠಿ ಚಾರ್ಜು ಮಾಡುತ್ತಾರೆ. ಆ ಕಾನೂನು ಬಾಹಿರಕೂಟದ ಸದಸ್ಯನಲ್ಲದ 'X'ನು ತೀವ್ರವಾಗಿ ಗಾಯಗೊಂಡನು. ಆತನು ನಷ್ಟ ಪರಿಹಾರವನ್ನು ರಾಜ್ಯ ಸರ್ಕಾರದಿಂದ ಕೇಳಬಯಸುತ್ತಾನೆ. ಅವನು ಗೆಲ್ಲುವನೇ ?

## UNIT – V

Q. No. 5. (a) Discuss the parliamentary control over public undertakings. Marks : 15

ಸಾರ್ವಜನಿಕ ಉದ್ದಿಮೆಗಳ ಮೇಲೆ ಸಂಸದೀಯ ನಿಯಂತ್ರಣವನ್ನು ಚರ್ಚಿಸಿರಿ.

OR/**ಅಥವಾ**

Examine the scope of commission of Inquiry Act - 1952. Refer decided cases.

ತೀರ್ಮಾನಿಸಿದ ಪ್ರಕರಣಗಳೊಂದಿಗೆ ವಿಚಾರಣಾ ಆಯೋಗ ಅಧಿನಿಯಮ 1952 ವ್ಯಾಪ್ತಿಯನ್ನು ಪರೀಕ್ಷಿಸಿರಿ.

(b) Write a note on "mal-administration". Marks : 5

ದುರಾಡಳಿತದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Express opinion on proposed Lok Pal-Bill.

ಉದ್ದೇಶಿತ ಲೋಕಪಾಲ ಮಸೂದೆ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರಿ.

---

www.StudentBounty.com